RNU AIR DHARWAD

SEPTEMBER 22, 2025

**AKASHAVANI - DHARWAD**

**PRADESH SAMACHARA (KANNADA) 12 PM**

<><><>

**ಆಕಾಶವಾಣಿ**

**ಪ್ರದೇಶ ಸಮಾಚಾರ**

<><><>

**ನಾಡಿನಾದ್ಯಂತ ಇಂದು ಶರನ್ನವರಾತ್ರಿ ಹಬ್ಬದಾಚರಣೆ ಆರಂಭಗೊಂಡಿದ್ದು, ಎಲ್ಲೆಡೆ ಸಂಭ್ರಮದ ವಾತಾವರಣ ಮನೆಮಾಡಿದೆ. ಮೈಸೂರು, ಚಾಮುಂಡಿ ಬೆಟ್ಟದಲ್ಲಿ ಬೂಕರ್ ಪ್ರಶಸ್ತಿ ಪುರಸ್ಕೃತ ಸಾಹಿತಿ ಬಾನು ಮುಷ್ತಾಕ್ ಅವರು, ನಾಡದೇವತೆ ಚಾಮುಂಡೇಶ್ವರಿ ಉತ್ಸವ ಮೂರ್ತಿಗೆ ಪುಷ್ಪಾರ್ಚನೆ ಮಾಡುವ ಮೂಲಕ ವಿಶ್ವವಿಖ್ಯಾತ ನಾಡಹಬ್ಬ ದಸರಾ ಮಹೋತ್ಸವಕ್ಕೆ ಚಾಲನೆ ನೀಡಿ ಮಾತನಾಡಿದರು. ದಸರಾ ಹಬ್ಬವು ಏಕತೆಯ ಸಂಕೇತವಾಗಿದ್ದು, ವಿಶಿಷ್ಟ ಆಚರಣೆಯು ಜಗತ್ತಿನ ಮಾನವ ಕುಲಕ್ಕೆ ಶಾಂತಿ, ನ್ಯಾಯ, ಸಮಾನತೆಯ ದೀಪವಾಗಲಿ ಎಂದು ಆಶಿಸಿದರು. ಮುಖ್ಯಮಂತ್ರಿ ಸಿದ್ದರಾಮಯ್ಯ ಸೇರಿದಂತೆ ಗಣ್ಯರು ಉಪಸ್ಥಿತರಿದ್ದರು. ಬೆಳಗ್ಗೆ ಚಾಮುಂಡೇಶ್ವರಿ ದೇವಿ ಸನ್ನಿಧಿಗೆ ಆಗಮಿಸಿದ ಗಣ್ಯರು, ಮೊದಲು ಶ್ರೀದೇವಿಯ ದರುಶನ ಪಡೆದರು. ಬಳಿಕ ಚಾಮುಂಡಿ ಬೆಟ್ಟದ ಆವರಣದಲ್ಲಿ ಸಿದ್ಧಪಡಿಸಲಾದ ವಿಶೇಷ ವೇದಿಕೆಯಲ್ಲಿ ದಸರಾ ಮಹೋತ್ಸವಕ್ಕೆ ಅಧಿಕೃತ ಚಾಲನೆ ನೀಡಲಾಯಿತು.**

<><><>

**ಕೊಡಗು ಜಿಲ್ಲೆಯ ಮಡಿಕೇರಿಯಲ್ಲಿ, ಜನೋತ್ಸವವಾಗಿ ದಸರಾ ಆಚರಿಸಲ್ಪಡುತ್ತದೆ. ಇಂದು ಸಂಜೆ ಮಡಿಕೇರಿಯಲ್ಲಿ, ಕೊಡವರು ನಾಲ್ಕು ಶಕ್ತಿ ದೇವತೆಗಳಿಗೆ ಪೂಜೆ ಸಲ್ಲಿಸಿ, ದಸರಾಕ್ಕೆ ಚಾಲನೆ ನೀಡಲಿದ್ದಾರೆ. ವಿಜಯದಶಮಿ ವರೆಗೆ, ನಾಲ್ಕು ಕರಗಗಳು, ಮಡಿಕೇರಿ ನಗರ ಪ್ರದಕ್ಷಿಣೆ ಕೈಗೊಂಡು, ಭಕ್ತರಿಂದ ಪೂಜೆ ಸ್ವೀಕರಿಸುವ, ವಿಶಿಷ್ಟ ಸಂಪ್ರದಾಯವಿದೆ.**

<><><>

**ಸರಕು ಮತ್ತು ಸೇವಾ ತೆರಿಗೆ, ಕೇಂದ್ರ ಮಂಡಳಿಯ, 56ನೇ ಸಭೆ ಶಿಫಾರಸಿನಂತೆ, 'ನೆಕ್ಸ್ಟ್ ಜೆನ್ ಜಿ.ಎಸ್.ಟಿ. – 2.0 ಪರಿ ೃತ ದರಗಳು, ನವರಾತ್ರಿಯ ಮೊದಲ ದಿನವಾದ ಇಂದು, ದೇಶಾದ್ಯಂತ ಜಾರಿಗೊಂಡಿವೆ. ಪ್ರದೇಶ ಸಮಾಚಾರಕ್ಕಾಗಿ, ತಮ್ಮ ಅನಿಸಿಕೆ ಹಂಚಿಕೊಂಡಿದ್ದಾರೆ, ಗೃಹಿಣಿ ಹಾಗೂ ಅರಣ್ಯ ಇಲಾಖೆಯಲ್ಲಿ ಪತ್ರಾಂಕಿತ ವ್ಯವಸ್ಥಾಪಕಿ, ಧಾರವಾಡದ ಸುಮನಾ ಜಯಂತ.**

<><><>

**ಸುಮನಾ ಜಯಂತ ಧ್ವನಿ (38) ಸೆಕೆಂದುಗಳು**

<><><>

**ನವರಾತ್ರಿಯ ಶುಭ ಸಂದರ್ಭ, ಜಿ.ಎಸ್ಟಿ ಉಳಿಕೆ ಉತ್ಸವದ ಜೊತೆಯಲ್ಲಿ, ರಾಜ್ಯಗಳು ಸ್ಥಳೀಯ ಉತ್ಪಾದಕತೆಯನ್ನು ಉತ್ತೇಜಿಸಿ, 'ಸ್ವದೇಶಿ' ಗೆ ಹೆಚ್ಚಿನ ಒತ್ತು ನೀಡಬೇಕು ಎಂದು ಪ್ರಧಾನಮಂತ್ರಿ ನರೇಂದ್ರ ಮೋದಿ ಕೋರಿದ್ದಾರೆ.**

<><><>

ಸೇವಾ ಪರ್ವದ ಅಂಗವಾಗಿ, ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ ಬಾಲ್ಯದ ದಿನಗಳನ್ನು ಆಧರಿಸಿದ 'ಚಲೋ ಜೀತೆ ಹೈ' ಕಿರು ಚಿತ್ರ ಪ್ರದರ್ಶನ, ಉಡುಪಿ ಜಿಲ್ಲೆ, ಮಣಿಪಾಲದ ಸೆಂಟ್ರಲ್ ಸಿನಿಮಾಸ್ ಚಿತ್ರಮಂದಿರದಲ್ಲಿ ಆಯೋಜಿತವಾಗಿದೆ. ಸೆಪ್ಟಂಬರ್ 18 ರಿಂದ ಯಶಸ್ವಿ ಮರು ಪ್ರದರ್ಶನ ಆರಂಭಗೊಂಡಿದ್ದು, ಪ್ರತಿದಿನ ಸಂಜೆ 6.30 ಕ್ಕೆ ಆರಂಭಗೊಳ್ಳುವ ಸಿನಿಮಾಗೆ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿದೆ.

<><><>

ಸರ್ಕಾರದಿಂದ ಯಾವ ನೆರವಿಲ್ಲದೇ, ಸಮಾಜಮುಖಿಯಾದ, ಗಣನೀಯ ಹಾಗೂ ಮಾದರಿ ಕಾರ್ಯಗಳನ್ನು ಸಹಕಾರ ಸಂಘಗಳು ಮಾಡುತ್ತಿವೆ ಎಂದು, ಮಲೆನಾಡು ಪ್ರದೇಶಾಭಿವೃದ್ಧಿ ಮಂಡಳಿ ಅಧ್ಯಕ್ಷ ಆರ್.ಎಂ.ಮಂಜುನಾಥ ಗೌಡ ಶ್ಲಾಘಿಸಿದ್ದಾರೆ. ಶಿವಮೊಗ್ಗದಲ್ಲಿ ಜರುಗಿದ, ಸಹಕಾರಿ ಸಂಘಗಳ ಸರ್ವ ಸದಸ್ಯರ ಸಭೆಯಲ್ಲಿ ಅವರು ಮಾತನಾಡಿದರು. ಸೌಹಾರ್ದ ಸಹಕಾರ ಸಂಘದಲ್ಲಿ, 3 ಸಾವಿರದ 600 ಮತ್ತು ಗೃಹ ನಿರ್ಮಾಣ ಸಹಕಾರ ಸಂಘದಲ್ಲಿ, 4 ಸಾವಿರದ 800ಕ್ಕೂ ಹೆಚ್ಚು ಜನ ಸದಸ್ಯತ್ವ ಪಡೆದಿದ್ದಾರೆ ಎಂದರು. ಗೃಹ ನಿರ್ಮಾಣ ಸಹಕಾರ ಸಂಘದ ಅಧ್ಯಕ್ಷ ಸಿ.ಎಸ್. ಡಾಕ್ಷರಿ ಮಾತನಾಡಿ, ಕಳೆದ 11 ವರ್ಷಗಳಲ್ಲಿ ಸಂಘ, 1 ಕೋಟಿ 50 ಲಕ್ಷ ರೂಪಾಯಿ ಲಾಭ ಗಳಿಸಿದೆ ಎಂದರು.

<><><>

ರಾಯಚೂರು ನಗರ ವ್ಯಾಪ್ತಿಯ ನಿರಾಶ್ರಿತರಿಗೆ, ಶಾಶ್ವತ ಸೂರು ಕಲ್ಪಿಸಲು, ಒಟ್ಟು 2 ಸಾವಿರದ 419 ಮನೆಗಳ ನಿರ್ಮಾಣಕ್ಕೆ, ಮಂಜೂರಾತಿ ನೀಡಲಾಗಿದೆ; ಎರಡು ಭಾಗಗಳಲ್ಲಿ, 2 ಸಾವಿರದ 3 ನೂರಾ 19 ಮನೆಗಳು ಹಂಚಿಕೆಗೆ ಸಿದ್ಧವಾಗಿವೆ ಎಂದು, ವಿಜ್ಞಾನ ಮತ್ತು ತಂತ್ರಜ್ಞಾನ ಖಾತೆ ಸಚಿವ, ಎನ್.ಎಸ್. ಬೋಸರಾಜು ತಿಳಿಸಿದ್ದಾರೆ. ರಾಯಚೂರು ಹೊರವಲಯದ, ಯರಮರಸ್ ಬಳಿ, ಪ್ರಧಾನಮಂತ್ರಿ ಆವಾಸ್ ಯೋಜನೆಯಡಿ, ಜಿ+3 ಮಹಡಿ ಮಾದರಿಯಲ್ಲಿ ನಿರ್ಮಿಸಿದ, ಮನೆಗಳಿಗೆ ಭೇಟಿ ನೀಡಿ, ಪರಿಶೀಲಿಸಿದರು. ಈಗಾಗಲೇ, ನಾಲ್ಕು ವರ್ಷ ವಿಳಂಬವಾಗಿದ್ದು, ಆದ್ಯತೆಯ ಮೇರೆಗೆ, ಪಾರದರ್ಶಕವಾಗಿ ಫಲಾನುಭವಿಗಳನ್ನು ಗುರುತಿಸಿ, ಮನೆಗಳನ್ನು ಶೀಘ್ರ ಹಂಚುವಂತೆ, ಸಚಿವರು ಮಹಾನಗರ ಪಾಲಿಕೆ ಅಧಿಕಾರಿಗಳಿಗೆ ಸೂಚಿಸಿದರು.

<><><>

ರಾಜ್ಯ ಹಿಂದುಳಿದ ವರ್ಗಗಳ ಆಯೋಗ, ಸಾಮಾಜಿಕ ಹಾಗೂ ಶೈಕ್ಷಣಿಕ ಸ್ಥಿತಿಗತಿ ಸಮೀಕ್ಷೆ, ಇಂದಿನಿಂದ ಅಕ್ಟೋಬರ್ 7ರ ವರೆಗೆ, ರಾಜ್ಯಾದ್ಯಂತ ಆಯೋಜಿಸಿದೆ. ಕೋಲಾರ ಜಿಲ್ಲೆಯಲ್ಲಿ ಆಯೋಜಿತ ಸಾಮಾಜಿಕ, ಶೈಕ್ಷಣಿಕ ಸಮೀಕ್ಷೆಗೆ ವಿಧಾನ ಪರಿಷತ್ ಸದಸ್ಯರಾದ ಎಂ.ಎಲ್ ಅನಿಲ್ ಕುಮಾರ್ ಚಾಲನೆ ನೀಡಿದರು.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

<><><>

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ ಮಧ್ಯಾಹ್ನ 1 ಗಂಟೆ 10 ನಿಮಿಷಕ್ಕೆ

<><><>